ಎಂ ವಿ ಸಿ. 1217/2018 ಪಿಡಬ್ಲ್ಯೂ ಃ 1- ಪದ್ಮ

ದಿನಾಂಕಃ ಃ 04.10.2019 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ಃ ಶ್ರೀ ಎಂ ಜಿ ಪಿ ಕೆ ವಕೀಲರಿಂದಃ

( ಅರ್ಜಿದಾರನಾದ ಮಹದೇವು ಇವರು ನ್ಯಾಯಾಲಯದಲ್ಲಿ ಹಾಜರಿದ್ದು ಸದರಿಯವರಿಗೆ ಮಾತನಾಡಿಸಲಾಗಿ ಅವರು ಮಾತನಾಡಲು ಬರುವುದಿಲ್ಲಎಂದು ಕೈ ಸನ್ನೆ ಮೂಲಕ ತೋರಿಸುತ್ತಿದ್ದು ಮತ್ತು ಅವರನ್ನು ಅವರ ಪತ್ನಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದು ಕಂಡು ಬರುತ್ತಿದ್ದು ಮತ್ತು ಸದರಿಯವರು ಪತ್ನಿಯ ಸಹಾಯವಿಲ್ಲದೇ ನ್ಯಾಯಾಲಯದಲ್ಲಿ ನಿಲ್ಲಲು ಮತ್ತು ನ್ಯಾಯಾಲಯದ ಒಳಗೆ ಬರಲು ಆಗದೇ ಇರುವುದು ಕಂಡು ಬಂದಿರುತ್ತದೆ.)

ಈ ಅರ್ಜಿಯ ಅರ್ಜಿದಾರನು ನನ್ನ ಪತಿ ಇದ್ದುದ ಅವರ ಪರ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದುಅದರಲ್ಲಿ ಬರೆದಿರುವ ಸಂಗತಿಗಳು ಸರಿ ಇರುತ್ತವೆ. ನನ್ನ ಸಾಕ್ಷಿಗೆ ಬೆಂಬಲಿತವಾಗಿ ಪ್ರಥಮ ವರ್ತಮಾನ ವರದಿಯ ನಕಲು ಪ್ರತಿ, ಪಿರ್ಯಾದಿಯ ನಕಲು ಪ್ರತಿ, ಸ್ಥಳ ಪಂಚನಾಮೆ ನಕಲು ಪ್ರತಿ , ಎಂ ವಿ ಐ ವರದಿಯ ನಕಲು ಪ್ರತಿ, ಗಾಯದ ಪ್ರಮಾಣ ಪತ್ರದ ನಕಲು ಪ್ರತಿ ಮತ್ತು ದೋಷರೋಪಣಾ ಪತ್ರದ ನಕಲು ಪ್ರತಿ ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ, ನಿಪಿಃ 1 ರಿಂದ 6 ಎಂದು, ನನ್ನ ಪತಿಯ ಹೆಸರಿಗೆ ಇರುವ ಆಧಾರ್ ಕಾರ್ಡ್ ನ ನೋಟರೀ ಪ್ರತಿ ಹಾಜರು ಪಡಿಸಿದ್ದು (ಈ ಹಂತದಲ್ಲಿ ಸಾಕ್ಷಿ ಆ ದಾಖಲೆಯ ಮೂಲ ಪ್ರತಿ ಹಾಜರು ಪಡಿಸಿದ್ದು ಅದನ್ನು ನಕಲು ಪ್ರತಿಯೊಂದಿಗೆ ಪರಿಶೀಲಿಸಿ ಸಾಕ್ಷಿಗೆ ಹಿಂದಿರುಗಿಸಲಾಯಿತು) ಅದನ್ನು ನಿಪಿಃ 7 ಎಂದು, ನನ್ನ ಪತಿಯ ಹೆಸರಿಗೆ ಜಮೀನು ಇರುವ ಬಗ್ಗೆ ತೋರಿಸಲು 2 ಪಹಣಿ ಪ್ರತಿ ಹಾಜರು ಪಡಿಸಿದ್ದು , ಅವುಗಳನ್ನು ಕ್ರಮವಾಗಿ ನಿಪಿಃ 8 ಮತ್ತು 9 ಎಂದು, ಮಿಮ್ಸ್ ಆಸ್ಪತ್ರೆ ಮತ್ತು ನಿಮಾನ್ಸ್ ಆಸ್ಪತ್ರೆಯವರು ನೀಡಿದ 2 ಡಿಸ್ಚಾರ್ಜ್ ಪತ್ರ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ 10 ಮತ್ತು 11 ಎಂದು, ಮಿಮ್ಸ್ ಆಸ್ಪತ್ರೆಯವರು ನೀಡಿದ ರೆಫರೆಂಟ್ ಶೀಟ್ ಮತ್ತು ನಿಮಾನ್ಸ್ ಆಸ್ಪತ್ರೆಯವರು ನೀಡಿದ ತುರ್ತು ಕೇಸ್ ವರದಿ ಹಾಜರುಪಡಿಸಿದ್ದು , ಅವುಗಳನ್ನು ಕ್ರಮವಾಗಿ ನಿಪಿಃ12 ಮತ್ತು 13 ಎಂದು, ನನ್ನ ಪತಿಗೆ ಗಾಯಗಳ ಚಿಕಿತ್ಸೆ ವೆಚ್ಚದ ಬಗ್ಗೆ ಇರುವ 56 ಬಿಲ್ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿಃ 14 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಬೇಕಾಗಿ ಕೋರುತ್ತೇನೆ.

ಪಾಟೀ ಸವಾಲು : 1 ಮತ್ತು 2 ನೇ ಎದುರುದಾರರ ಪರ : ಶ್ರೀ ಕೆ ಎಂ ಮತ್ತು ಶ್ರೀ ಎನ್ ಪಿ ವಕೀಲರಿಂದಃ

2 ನೇಎದುರುದಾರರ ಪರ ವಕೀಲರು ಹಾಜರಿದ್ದು ಕಾಲಾವಕಾಶ ಕೋರುತ್ತಿದ್ದು ಕಡತ ಪರಿಶೀಲಿಸಲಾಗಿ ತಕರಾರು ಸಲ್ಲಿಸದೇ ಇದ್ದು ಆದರೂ ನ್ಯಾಯಯುತ ದೃಷ್ಠಿಯಿಂದ ಒಂದು ಕಾಲಾವಕಾಶ ನೀಡಿ ಪಾಟೀ ಸವಾಲು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ